ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಸಂತಾಪ

ಪತ್ರಿಕೆಯ ಹೆಸರು : NAME OF THE NEWS PAPER: ವಿಶ್ವವಾಣಿ    ದಿನಾಂಕ : DATE 28/02/2020

# ಚತುರ್ವೇದ ಪಾರಂಗತ ಇನ್ನಿಲ್ಲ

## ಹತ್ಯಾಕಾಂಡದಲ್ಲಿ ವೀರಮರಣ ಅಪ್ಪಿದ ಸ್ವಾತಂತ್ರ್ಯ ಹೋರಾಟಗಾರರಿಗೆ ಅಂತಿಮ ವಿಧಿವಿಧಾನ ನೆರವೇರಿಸಿದ್ದ ಬ್ರಹ್ಮಚಾರಿ

28-2-20

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು

ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಕ್ರಿಯವಾಗಿ ಭಾಗ ವಹಿಸಿ, ಜಲಿಯನ್ ವಾಲಾಬಾಗ್ ಹತ್ಯಾಕಾಂಡದ ಸಾಕ್ಷಿಯಾಗಿದ್ದ ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಸುಧಾಕರ್ ಚತುರ್ವೇದಿ ಬುಧವಾರ ತಡರಾತ್ರಿ ಮಧ್ಯರಾತ್ರಿ 2ಗಂಟೆ ಸುಮಾರಿಗೆ ಜಯನಗರದ 5ನೇ ಬ್ಲಾಕ್‌ನಲ್ಲಿರುವ ಮನೆಯಲ್ಲಿ ಸುಧಾಕರ್ ಚತುರ್ವೇದಿ ಮೃತ ಪಟ್ಟಿದ್ದಾರೆ. ಗುರುವಾರ ಚಾಮರಾಜಪೇಟೆಯ ಹಿಂದೂ ರುದ್ರ ಭೂಮಿಯಲ್ಲಿ ಅಂತಿಮ ವಿಧಿ ವಿಧಾನಗಳು ನೆರವೇರಿದೆ ಎಂದು ಬೆಂಗಳೂರಿನ ಆರ್ಯ ಸಮಾಜ ತಿಳಿಸಿದೆ.



ಮಹಾತ್ಮಗಾಂಧಿ ಅವ ರೊಂದಿಗೆ ಉತ್ತಮ ಒಡನಾಟ ಹೊಂದಿದ್ದು, ಅವರಿಗೆ ಸ್ಟೆನೋಗ್ರಾಫರ್ ಆಗಿದ್ದ ಚತುರ್ವೇದಿ ಅವರು, ಜಲಿಯನ್ ವಾಲಾ ಬಾಗ್ ಹತ್ಯಾಕಾಂಡದ ಪ್ರತ್ಯಕ್ಷ ಸಾಕ್ಷಿ. 1897ರ ರಾಮನವಮಿಯಂದು ಬೆಂಗಳೂರಿನ ಬಳೆಪೇಟೆಯಲ್ಲಿ ಜನಿಸಿದ್ದ ಸುಧಾಕರ್ ಚತುರ್ವೇದಿ ಅವರು 11ನೇ ವಯಸ್ಸಿಗೆ ಉತ್ತರ ಭಾರತದ ಪ್ರಸಿದ್ಧ ಕಾಂಗಡಿ ಗುರುಕುಲಕ್ಕೆ ಸೇರಿ ನಾಲ್ಕು ವೇದಗಳನ್ನು ಅಧ್ಯಯನ ಮಾಡಿದ್ದರು. ಮೂಲತಃ ಇವರು ಚತುರ್ವೇದಿ ಕುಟುಂಬಕ್ಕೆ ಸೇರದಿದ್ದರೂ, ಸತತವಾಗಿ 25 ವರ್ಷಗಳ ವೇದಾಭ್ಯಾಸ ಮಾಡಿದ್ದರಿಂದಾಗಿ ಸಾರ್ವದೇಶಿಕಾ ಆರ್ಯಾ ಪ್ರತಿನಿಧಿ ಸಭೆ ಚತುರ್ವೇದಿ ಎಂಬ ಉಪನಾಮವನ್ನು ಸುಧಾಕರ್ ಅವರಿಗೆ ನೀಡಿ ಗೌರವಿಸಿತ್ತು.

ಕನ್ನಡ, ಸಂಸ್ಕೃತ, ಇಂಗ್ಲಿಷ್, ಹಿಂದಿ ಭಾಷೆಗಳಲ್ಲಿ ಪುಸ್ತಕಗಳನ್ನು ಬರೆದಿದ್ದಾರೆ. ಮೂಲತಃ ಪತ್ರಕರ್ತರೂ ಆಗಿದ್ದ ಸುಧಾಕರ್ ಚತುರ್ವೇದಿ. ಅವರು ಅತಿ ಹೆಚ್ಚು ವರ್ಷ ಬದುಕಿದ್ದ ಹಿರಿಯರ ದಾಖಲೆಯ ಸಾಲಿಗೂ ಸೇರ್ಪಡೆಯಾಗಿದ್ದಾರೆ. ದೇಶದ ಸ್ವಾತಂತ್ರ್ಯ ಹೋರಾ ಟಕ್ಕೆ ತಮ್ಮನ್ನು ತಾವು ಅರ್ಪಿಸಿಕೊಂಡು 13 ವರ್ಷಗಳ ಕಾಲ ಸೆರೆವಾಸ ಅನುಭವಿಸಿದ್ದರು. ಬ್ರಹ್ಮಚಾರಿ ಯಾ ಗಿದ್ದ ಇವರು, ಒಬ್ಬ ಮಗನನ್ನು ದತ್ತು ಪಡೆದಿದ್ದರು.

ಜಲಿಯನ್ ವಾಲಾಬಾಗ್‌ನ ಏಕೈಕ ಸಾಕ್ಷಿ: 1919ರಲ್ಲಿ ಸಾವಿರಾರು ಜನರನ್ನು ಹತ್ಯೆಗೈದ ಜಲಿಯನ್ ವಾಲಾಬಾಗ್ ಹತ್ಯಾಕಾಂಡವನ್ನು ಕಣ್ಣಾರೆ ಕಂಡಿದ್ದ ಏಕೈಕ ಸಾಕ್ಷಿಯೆಂದರೆ ಸುಧಾಕರ್. ಹತ್ಯಾಕಾಂಡದಲ್ಲಿ ಸಾವಿರಾರು ಜನರು ಮೃತಪಟ್ಟಿದ್ದರು. ಆದರೆ, ಆಗಿನ ಬ್ರಿಟಿಷ್ ಸರಕಾರ 670 ಮಂದಿ ಮೃತಪಟ್ಟಿದ್ದಾರೆ ಎಂದು ಲೆಕ್ಕ ನೀಡಿತ್ತು. ಈ ಹತ್ಯಾಕಾಂಡದಲ್ಲಿ ವೀರಮರಣ ಅಪ್ಪಿದ ಸ್ವಾತಂತ್ರ್ಯ ಹೋರಾಟಗಾರರಿಗೆ ಅಂತಿಮ ವಿಧಿವಿಧಾನ ನೆರವೇರಿಸುವಂತೆ ಮಹಾತ್ಮ ಗಾಂಧಿ ಅವರು ಸೂಚನೆ ನೀಡಿದ್ದರಿಂದ, ಮಂತ್ರ, ವೇದ ಘೋಷಗಳೊಂದಿಗೆ ಮೃತಪಟ್ಟ ಎಲ್ಲರಿಗೂ ನದಿ ದಡದಲ್ಲಿ ಅಂತ್ಯ ಸಂಸ್ಕಾರ ಮಾಡಿದ್ದರು.

### ನಾಲ್ಕು ವೇದಗಳ ಪಾರಂಗತ

ನಾಲ್ಕು ವೇದವನ್ನು ಅಭ್ಯಾಸಿಸಿದ್ದ ಸುಧಾಕರ್ ಅವರು ಭಾರತದ ಆತ್ಮವೇ ಧರ್ಮ ಎಂಬುದನ್ನು ಅತ್ಯಂತ ಶ್ರದ್ಧೆಯಿಂದ ನಂಬಿ, ಆರ್ಯಸಮಾಜದ ಶ್ರದ್ಧಾನಂದರ ಶಿಷ್ಯರಾಗಿ ವೇದಗಳ ಅಧ್ಯಯನದಲ್ಲಿ ತೊಡಗಿಸಿಕೊಂಡವರು. ವೇದ ಪ್ರಚಾರಕ್ಕಾಗಿ ಸುಮಾರು 50ಕ್ಕೂ ಹೆಚ್ಚು ಕೃತಿಗಳನ್ನು ಕನ್ನಡ, ಇಂಗ್ಲಿಷ್, ಹಿಂದಿ ಸೇರಿದಂತೆ ನಾಲ್ಕು ಭಾಷೆಯಲ್ಲಿ ಬರೆದಿದ್ದರು. ಋಗ್ವೇದ ದರ್ಶನ ಭಾಗ-1, ಭಗವಾನ್ ಶ್ರೀ ರಾಮಚಂದ್ರ, ವೇದೋಕ್ತ ಜೀವನ ಪಥ, ಉಪನಿಷತ್ ಭಾಷ್ಯ ಪ್ರಮುಖ ಕೃತಿಗಳು.

### ಕೊನೆಗಳಿಗೆವರೆಗೆ ಸತ್ಸಂಗ

120 ವರ್ಷ ಕಳೆದರೂ ಅವರ ಉತ್ಸಾಹ ಮಾತ್ರ ಕುಂದಿರಲಿಲ್ಲ. ಕೆಲ ತಿಂಗಳ ಹಿಂದಿನವರೆಗೆ ಪ್ರತಿವಾರ ಸತ್ಸಂಗ ನಡೆಸುತ್ತಿದ್ದ ಸುಧಾಕರ್ ಅವರು, ವಿಚಾರ ಮಂಥನಕ್ಕಾಗಿ ಆಗಮಿಸುತ್ತಿದ್ದ ವೈಚಾರಿಕರು, ಶಿಷ್ಯರೊಂದಿಗೆ ತೀರಾ ಸರಳ ಎನ್ನುವ ರೀತಿ ಹರಟೆ ಹೊಡೆಯುತ್ತಿದ್ದರು. ಭೇಟಿಯಾಗಲು ಆಗಮಿಸುತ್ತಿದ್ದ ಪ್ರತಿಯೊಬ್ಬರನ್ನು ಹಸನ್ಮುಖರಾಗಿ ಸ್ವಾಗತಿಸುತ್ತಿದ್ದರು. ಸದಾ ನಗುತ್ತಾ ನಗಿಸುತ್ತಾ, ಆರೋಗ್ಯ, ನೆಮ್ಮದಿ, ಸಂತೋಷಗಳೇ ಈ ಶತಾಯುಷಿಯ ಗುಟ್ಟು ಎಂದು ಅವರ ಆತ್ಮೀಯರೊಬ್ಬರು ನೆನೆದಿದ್ದಾರೆ.

3